# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 796 |
| ಉತ್ತರಿಸಬೇಕಾದ ದಿನಾಂಕ | 20-09-2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಭಾಗದ ಜನರಿಗೆ ಕುಡಿಯುವ ನೀರಿನ ಬಗ್ಗೆ ಸರ್ಕಾರ ಯಾವ ಯಾವ ಯೋಜನೆಯನ್ನು ರೂಪಿಸಿದೆ; ಸದರಿ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; (ಯೋಜನೆವಾರು ಪ್ರತ್ಯೇಕ ಮಾಹಿತಿ ನೀಡುವುದು) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಭಾಗದ ಜನರಿಗೆ ಕುಡಿಯುವ ನೀರು ಒದಗಿಸಲು ಕೈಗೊಂಡಿರುವ ಯೋಜನೆಯ ವಿವರ, ಸದರಿ ಯೋಜನೆಗೆ ಬಿಡುಗಡೆಯಾಗಿರುವ ಅನುದಾನದ ವಿವರವನ್ನು **ಅನುಬಂಧದಲ್ಲಿರಿಸಿದೆ.** |
| ಆ) | ಕೋಲಾರ ನಗರ ಮಾಲೂರು ಹಾಗೂ ಬಂಗಾರಪೇಟೆ ಹಾದು ಹೋಗುವ ಸುಮಾರು 45 ಹಳ್ಳಿಗಳಿಗೆ ನೀರು ಪೂರೈಸುವ ಯೋಜನೆ ಯಾವ ಹಂತದಲ್ಲಿದೆ; ಕಾಮಗಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಯರಗೋಳ ಯೋಜನೆಯನ್ನು ಎರಡು ಹಂತಗಳಲ್ಲಿ ಕಾರ್ಯಗತಗೊಳಿಸುತ್ತಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.<br>ಅ) ಸರ್ಕಾರದ ಆದೇಶ ಸಂಖ್ಯೆ ನಅಇ 26 ಯುಡಬ್ಲ್ಯೂಎಸ್ 2006, ದಿನಾಂಕ 22.08.2007 ರಲ್ಲಿ ಯರಗೋಳು ಜಲಾಶಯ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.160.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಅನುದಾನದಡಿ ಬಂಗಾರಪೇಟೆ ತಾಲ್ಲೂಕಿನ ಯರಗೋಳ್ ಗ್ರಾಮದ ಬಳಿಯ ಮಾರ್ಕಂಡೇಯ ನದಿಗೆ ಅಡ್ಡಲಾಗಿ 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ ಹಾಗೂ ಈ ಕೆಳಕಂಡ ಪೂರಕ ಕಾಮಗಾರಿಗಳನ್ನು ಕೈಗೊಂಡು ದಿನಾಂಕ 30-09-2020 ರಂದು ಪೂರ್ಣಗೊಳಿಸಲಾಗಿರುತ್ತದೆ. |

1) 500 MCFT Concrete Dam,
2) 813 mm dia MS Rising main – 9.5 Kms
3) Jackwell cum pump house 16.2 m x 12 m

ಆ) ಯರಗೋಳ್ ಯೋಜನೆಯ 2 ನೇ ಹಂತದಲ್ಲಿ ಕೇಂದ್ರ ಸರ್ಕಾರದ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿಯ ವಿವರಗಳು | **ಅಂದಾಜು ಪಟ್ಟಿಯ ಅನುಸಾರ** |
|---|---|---|
| 1 | M.S. ಹಾಗೂ D.I ಕೊಳವೆ ಮಾರ್ಗ. | 66.41 **ಕಿ.ಮಿ.** |
| 2 | P.V.C ವಿತರಣಾ ಕೊಳವೆ ಮಾರ್ಗ. | 71 **ಕಿ.ಮಿ.** |
| 3 | ಮೇಲ್ಮಟ್ಟದ ಜಲಸಂಗ್ರಹಾಗಾರಗಳು | ಕೋಲಾರ - 7<br>ಬಂಗಾರಪೇಟೆ - 2<br>ಮಾಲೂರು - 1<br>**ಒಟ್ಟು 10.** |
| 4 | ಜಲ ಶುದ್ಧೀಕರಣ ಘಟಕ | ಕೋಲಾರ - 1<br>ಬಂಗಾರಪೇಟೆ - 1<br>**ಒಟ್ಟು 2.** |
| 5 | ಪಂಪಿಂಗ್ ಮಶಿನರಿ | ಯರಗೋಳ್ - 3<br>ಬಂಗಾರಪೇಟ್ - 7<br>ಕೋಲಾರ – 3<br>**ಒಟ್ಟು 13.** |
| 6 | 11 KV **ವಿದ್ಯುತ್** ಮಾರ್ಗ | 70.48 ಕಿಮಿ. |

| | | |
|---|---|---|
| ಇ) | ಯರಗೋಳ ಯೋಜನೆ ಯಾವ ಹಂತದಲ್ಲಿದೆ; ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ | ಸದರಿ ಯೋಜನೆಯಡಿ ಈಗಾಗಲೇ ಶೇ.80 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಳನ್ನು ಜನವರಿ 2023 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |

| | | |
|---|---|---|
| | ಮುಕ್ತಾಯಗೊಳಿಸಲಾಗುವುದು; ಈ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು; (ಸಂಕ್ಷಿಪ್ತವಾದ ಮಾಹಿತಿ ನೀಡುವುದು) | ಕಾಮಗಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದರಲ್ಲಿ ಆದ ವಿಳಂಬಕ್ಕೆ ಗುತ್ತಿಗೆದಾರರಿಗೆ ರೂ.215.83 ಲಕ್ಷಗಳ ದಂಡ ವಿಧಿಸಲಾಗಿದೆ. (ಮೆ\|\| ಇಂಜಿನೀಯರಿಂಗ್ ಪ್ರಾಜೆಕ್ಟ್ (ಇಂಡಿಯಾ) ಲಿಮಿಟೆಡ್, ಹೈದರಾಬಾದ್ - ರೂ.209.26 ಲಕ್ಷಗಳು ಮತ್ತು ಮೆ\|\| ಅರುಣ್ ಇಂಜಿನಿಯರಿಂಗ್, ಬೆಂಗಳೂರು - ರೂ.6.57 ಲಕ್ಷಗಳು)<br><br>ಸರ್ಕಾರದ ಆದೇಶ ಸಂಖ್ಯೆ ನಅಇ 23 ಪಿಆರ್‌ಜೆ 2019, ದಿನಾಂಕ 16.01.2021 ರಲ್ಲಿ ರೂ.12776.40 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಅಂದಾಜು ಪಟ್ಟಿಯನ್ವಯ ಕೋಲಾರ ನಗರದಲ್ಲಿ ಉಳಿಕೆ 4 ಮೇಲ್ಮಟ್ಟದ ಜಲಸಂಗ್ರಹಾಗಾರಗಳು, ಡಿ.ಐ ಏರು ಕೊಳವೆ ಮಾರ್ಗ ಹಾಗೂ ಹೆಚ್.ಡಿ.ಪಿ.ಇ ವಿತರಣಾ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ದಿನಾಂಕ 14-09-2022 ರಂದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಮಾರ್ಚ 2023 ಅಂತ್ಯಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕುಡಿಯುವ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. |
| ಈ) | ಮಾರ್ಕಂಡೇಯ ಜಲಾಶಯದ ನೀರನ್ನು ಯರಗೋಳ ಯೋಜನೆಗೆ ಸೇರಿಸಲಾಗಿದೆಯೆ; ಇಲ್ಲದಿದ್ದಲ್ಲಿ ಸೇರಿಸುವ ಪ್ರಯತ್ನ ಆಗಿದೆಯೇ? (ಸಂಕ್ಷಿಪ್ತ ಮಾಹಿತಿ ನೀಡುವುದು) | ಯರಗೋಳು ಡ್ಯಾಂಗೆ ಮಾಲೂರು ತಾಲ್ಲೂಕಿನ ಮಾರ್ಕಾಂಡೇಯ ಡ್ಯಾಂ (ಬೂದಿಕೋಟೆ ಸಮೀಪದಲ್ಲಿರುವ ಮಾರ್ಕಾಂಡೇಯ ಕೆರೆ) ನಿಂದ ನೀರು ಕೋಡಿ ಬಿದ್ದಾಗ ಹರಿದು ಬರುತ್ತಿರುತ್ತದೆ. ಯರಗೊಳು ಅಣೆಕಟ್ಟೆಗೆ ಒಟ್ಟು ಮಾರ್ಕಾಂಡೇಯ catchment ಹೊರತುಪಡಿಸಿ 101.165 Sq.km catchment ಪ್ರದೇಶದಲ್ಲಿ ಸಂಗ್ರಹವಾಗುವ ಮಳೆಯ ನೀರು ಹರಿದು ಬಂದು ಸಂಗ್ರಹವಾಗುತ್ತದೆ. ಮಾರ್ಕಾಂಡೇಯ ಕೆರೆಯ ಮೇಲ್ಭಾಗದಲ್ಲಿರುವ (Upstream tanks) ಕೆರೆಗಳಿಗೆ ಬೆಂಗಳೂರು ನಗರದ ಸಂಸ್ಕರಿಸಿದ ತ್ಯಾಜ್ಯ ನೀರನ್ನು (Secondary treated effluent) ಹರಿಸುವ ಕೆ.ಸಿ ವ್ಯಾಲಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗಿರುತ್ತದೆ. |

ಸಂಖ್ಯೆ: ನಅಇ 154 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**

## ಅನುಬಂಧ

**ಕೋಲಾರ ಜಿಲ್ಲೆ:**

| ಕ್ರ ಸಂ | ನಗರ/ ಪಟ್ಟಣ | ಯೋಜನೆ | ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ |
|---|---|---|---|
| 1 | ಬಂಗಾರಪೇಟೆ ತಾಲ್ಲೂಕು ಯರಗೋಳು ಗ್ರಾಮದ ಬಳಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಿಸಿ ಅಣೆಕಟ್ಟು ನೀರನ್ನು ಮೂಲವಾಗಿ ಪರಿಗಣಿಸಿ ಕೋಲಾರ ನಗರ ಬಂಗಾರಪೇಟೆ ಮತ್ತು ಮಾಲೂರು ಪಟ್ಟಣಗಳಿಗೆ ಹಾಗೂ ಮಾರ್ಗಮಧ್ಯದ 45 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಸಮಗ್ರ ಯೋಜನೆಯ ಅಂದಾಜು ಪಟ್ಟಿಗಳಿಗೆ 2 ಭಾಗಗಳಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ನೀರು ಸರಬರಾಜು ವಿವರಗಳು ಈ ಕೆಳಕಂಡಂತೆ ಇರುತ್ತದೆ. | | |
| | ಕೋಲಾರ/ ಮಾಲೂರು/ ಬಂಗಾರಪೇಟೆ | **1 ನೇ ಹಂತ:** ಬಂಗಾರಪೇಟೆ ತಾಲ್ಲೂಕಿನ ಯರಗೋಳು ಗ್ರಾಮದ ಬಳಿ ಮಾರ್ಕಾಂಡೇಯ ನದಿಗೆ ಅಡ್ಡಲಾಗಿ 500 ಎಮ್.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ನಿರ್ಮಾಣ ಹಾಗು ಪೂರಕ ಕಾಮಗಾರಿಗಳು<br>**ಅಂದಾಜು ಮೊತ್ತ:** ರೂ. 16000.00 ಲಕ್ಷಗಳು<br>**ಪರಿಷ್ಕೃತ ಅಂದಾಜು ಮೊತ್ತ:** ರೂ.18070.00 ಲಕ್ಷಗಳು (ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ)<br><br>**2 ನೇ ಹಂತ:** 500 ಎಮ್.ಸಿ.ಎಫ್.ಟಿ ಸಾಮರ್ಥ್ಯದ ಯರಗೋಳು ಅಣೆಕಟ್ಟು ಮೂಲದಿಂದ ಕೋಲಾರ ನಗರ, ಮಾಲೂರು ಮತ್ತು ಬಂಗಾರಪೇಟೆ ಪಟ್ಟಣ ಹಾಗೂ 45 ಮಾರ್ಗಮಧ್ಯದ ಹಳ್ಳಿಗಳಿಗೆ ಯು.ಐ.ಡಿ.ಎಸ್.ಎಸ್.ಎಮ್.ಟಿ ಯೋಜನೆಯಡಿ ಕುಡಿಯುವ ನೀರೊದಗಿಸುವ ಕಾಮಗಾರಿಗಳು<br>**ಅಂದಾಜು ಮೊತ್ತ:** ರೂ. 7992.80 ಲಕ್ಷಗಳು<br>**ಪರಿಷ್ಕೃತ ಅಂದಾಜು ಮೊತ್ತ:** ರೂ. 12776.00 ಲಕ್ಷಗಳು | 15998.00<br><br>9226.00 |
| 2 | ಶ್ರೀನಿವಾಸಪುರ | ಶ್ರೀನಿವಾಸಪುರ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜುಯೋಜನೆ<br>**ಅಂದಾಜು ಮೊತ್ತ:** ರೂ. 1552.00 ಲಕ್ಷಗಳು | 1292.52 |
| 3 | ಮುಳಬಾಗಿಲು | ಮುಳಬಾಗಿಲು ಪಟ್ಟಣಕ್ಕೆ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆ<br>**ಅಂದಾಜು ಮೊತ್ತ:** ರೂ. 2770.69 ಲಕ್ಷಗಳು | 1829.56 |

| | | | |
|---|---|---|---|
| 10 | ನೀರು ಸರಬರಾಜು ಪ್ರದೇಶಗಳು | : | ಸದರಿ ಜಲಸಂಗ್ರಹಗರದಿಂದ ವಾರ್ಡ್ ನಂ. 22 ಮತ್ತು 23 ಕ್ಕೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು. |

## 6) ಗೌರಿಬಿದನೂರು ನಗರದ 2 ಸಂಖ್ಯೆ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವುದು:

ಗೌರಿಬಿದನೂರು ನಗರಕ್ಕೆ 2 ಸಂಖ್ಯೆ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿಯನ್ನು ಮಂಡಳಿವತಿಯಿಂದ ಕೈಗೊಳ್ಳಲು ಯೋಜನ ನಿರ್ದೇಶಕರು, ನಗಾರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ರವರು ಪತ್ರದ ಸಂಖ್ಯೆ: 190 ದಿ: 17-08-2017 ರಲ್ಲಿ ಕೋರಿರುತ್ತಾರೆ. ಅದರಂತೆ, ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂ. | ಕಾಮಗಾರಿಯ ಹೆಸರು | : | ಗೌರಿಬಿದನೂರು ನಗರಕ್ಕೆ 2 ಸಂಖ್ಯೆ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ |
|---|---|---|---|
| 1 | ಅನುದಾನ | : | ನಗರೋತ್ಥಾನ-3 |
| 2 | ಅಂದಾಜು ವೆಚ್ಚ | : | ರೂ. 199.60 ಲಕ್ಷ |
| 3 | ಆಡಳಿತ್ಮಾಕ ಅನುಮೋದನೆ | : | ದಿ: 05-12-2018 |
| 4 | ತಾಂತ್ರಿಕ ಮಂಜೂರತಿ | : | ದಿ: 13-06-2019 |
| 5 | ಗುತ್ತಿಗೆದಾರರು | : | ಮೆ\|\| ಎಂ.ಎನ್ ರಮೇಶ್, ತುಮಕೂರು |
| 6 | ಗುತ್ತಿಗೆ ವೆಚ್ಚ | : | ರೂ. 170.78 ಲಕ್ಷ |
| 7 | ಗುತ್ತಿಗೆ ಅವಧಿ | : | 11 ತಿಂಗಳು |
| 8 | ಪ್ರಾರಂಭ ದಿನಾಂಕ | : | 21-12-2019 |
| 9 | ಕಾಮಗಾರಿಯ ಹಂತ | : | ಮುಕ್ತಾಯಗೊಂಡಿದೆ. |
| 10 | ನೀರು ಸರಬರಾಜು ಪ್ರದೇಶಗಳು | : | ಸದರಿ ಜಲಸಂಗ್ರಹಗರದಿಂದ ವಾರ್ಡ್ ನಂ. 19 ಮತ್ತು 21 ರ ಬಡವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು. |

| | | | |
|---|---|---|---|
| 4 | ಕೋಲಾರ | ಕೋಲಾರ ನಗರಕ್ಕೆ ಅಮೃತ್ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆ **ಅಂದಾಜು ಮೊತ್ತ:** ರೂ. 707.00 ಲಕ್ಷಗಳು | 786.86 |
| 5 | ಕೋಲಾರ | ಕೋಲಾರ ನಗರಕ್ಕೆ ಅಮೃತ್ ಯೋಜನೆಯ ಹೆಚ್ಚುವರಿ ಅನುದಾನದಡಿ ಕುಡಿಯುವ ನೀರು ಸರಬರಾಜು ಯೋಜನೆ **ಅಂದಾಜು ಮೊತ್ತ:** ರೂ. 1033.23 ಲಕ್ಷಗಳು | 919.45 |
| 6 | ರಾಬರ್ಟ್ಸನ್ ಪೇಟೆ/ ಕೆ.ಜಿ.ಎಫ್ | ಕೆ.ಜಿ.ಎಫ್ ನಗರಕ್ಕೆ ಅಮೃತ್ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆ ಅಂದಾಜು ಮೊತ್ತ: ರೂ. 5426.00 ಲಕ್ಷಗಳು | 3349.30 |
| 7 | ರಾಬರ್ಟ್ಸನ್ ಪೇಟೆ/ ಕೆ.ಜಿ.ಎಫ್ | ಕೆ.ಜಿ.ಎಫ್ ನಗರಕ್ಕೆ ಅಮೃತ್ ಹೆಚ್ಚುವರಿ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆ ಅಂದಾಜು ಮೊತ್ತ: ರೂ. 1281.00 ಲಕ್ಷಗಳು | 1219.07 |

**ಚಿಕ್ಕಬಳ್ಳಾಪುರ ಜಿಲ್ಲೆ**

| **ಕ್ರ ಸಂ** | **ನಗರ/ ಪಟ್ಟಣ** | **ಯೋಜನೆ** | **ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ** |
|---|---|---|---|
| 1 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ನಗರಕ್ಕೆ ಜಕ್ಕಲಮೊಡಗು ಜಲಾಶಯದಿಂದ 3ನೇ ಹಂತದ ಕುಡಿಯುವ ನೀರು ಸರಬರಾಜು ಯೋಜನೆ. **ಅಂದಾಜು ಮೊತ್ತ:** ರೂ. 2700.00 ಲಕ್ಷಗಳು **ಪರಿಷ್ಕೃತ ಅಂದಾಜು ಮೊತ್ತ:** ರೂ. 4595.00 ಲಕ್ಷಗಳು | 3993.94 |
| 2 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ನಗರ ನೀರು ವಿತರಣ ಜಾಲ ಅಳವಡಿಸುವ ಯೋಜನೆ **ಅಂದಾಜು ಮೊತ್ತ:** ರೂ. 1106.40 ಲಕ್ಷಗಳು **ಪರಿಷ್ಕೃತ ಅಂದಾಜು ಮೊತ್ತ:** ರೂ. 1626.92 ಲಕ್ಷಗಳು | 1469.05 |
| 3 | ಚಿಂತಾಮಣಿ | ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ ನೀರು ಸರಬರಾಜು ಯೋಜನೆ **ಅಂದಾಜು ಮೊತ್ತ:** ರೂ.1095.00 ಲಕ್ಷಗಳು | 995.00 |

| | | | |
|---|---|---|---|
| 4 | ಚಿಕ್ಕಬಳ್ಳಾಪುರ | ನಗರೋತ್ಥಾನ-3 ರೇವಣಿ ಕಾಮಗಾರಿಯಡಿ ಚಿಕ್ಕಬಳ್ಳಾಪುರ ನಗರದ ದಿನ್ನೆಹೊಸಹಳ್ಳಿ ರಸ್ತೆಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿ: **ಅಂದಾಜು ಮೊತ್ತ:** ರೂ. 100.00 ಲಕ್ಷಗಳು | 100.00 |
| 5 | ಶಿಡ್ಲಘಟ್ಟ | ಶಿಡ್ಲಘಟ್ಟ ನಗರದ ಆಶ್ರಯ ಕಾಲೋನಿ ಮತ್ತು ರೈಲ್ವೆ ಸ್ಟೇಷನ್ ಬಳಿ 1 ಸಂಖ್ಯೆ 5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರಗಳು **ಅಂದಾಜು ಮೊತ್ತ:** ರೂ. 91.80 ಲಕ್ಷಗಳು | 91.80 |
| 6 | ಗೌರಿಬಿದನೂರು | ಗೌರಿಬಿದನೂರು ನಗರದಲಿ 2 ಸಂಖ್ಯೆ 5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿ **ಅಂದಾಜು ಮೊತ್ತ:** ರೂ. 199.60 ಲಕ್ಷಗಳು | 199.60 |